ದ.ರಾ. ಬೇಂದ್ರೆ ಅವರ 'ಬೆಳಗು' ಕವಿತೆ ಅಸಂಖ್ಯ ಕಾವ್ಯಪ್ರೇಮಿಗಳ ಮನಸ್ಸನ್ನು ಬೆಳಗಿದ ಕವಿತೆ. ಆ ಕವಿತೆಯನ್ನು ಬೇಂದ್ರೆಯವರು ಬರೆದು ಈ ವರ್ಷಕ್ಕೆ 100 ವರ್ಷಗಳು. ಆ ಕವಿತೆಯ ವಿಶಿಷ್ಟತೆಯ ಬಗೆಗಿನ ಬರಹ ಇಲ್ಲಿದೆ.

ದ.ರಾ. ಬೇಂದ್ರೆಯವರು ರಚಿಸಿದ 'ಬೆಳಗು' ಕವನ 1919ರ 'ಸ್ವಧರ್ಮ' ಪತ್ರಿಕೆಯಲ್ಲಿ ಬೆಳಕು ಕಂಡಿತು. ಅದು ನವನವೀನ ಕಲ್ಪನೆ, ನೂತನ ಛಂದಃ ಪ್ರಯೋಗದಿಂದ ಪಂಚೇಂದ್ರಿಯಗಳ ಜಾಗೃತಿ, ಶಾಂತಿಯ ಅನುಭವವನ್ನು ಕಾವ್ಯವಾಗಿ ಕಡೆದಿಟ್ಟಿತು. ಅದು ನವೋದಯ ಕಾವ್ಯದ ಉದಯವನ್ನು ಸಾಂಕೇತಿಕವಾಗಿ ಪ್ರಕಟಪಡಿಸಿದ ಕವನವಾಗಿತ್ತು.

ಆ ಹೊಸತು ಜನಕ್ಕೆ ಮೆಚ್ಚುಗೆ ಆಗುವುದೋ ಇಲ್ಲವೊ ಎಂದು ಅವರು ಅದನ್ನು 'ಸದಾನಂದ ಜಂಗಮ' ಎಂಬ ಕಾವ್ಯನಾಮದಲ್ಲಿ ಪ್ರಕಟಿಸಿದ್ದರು. ಅವರು 1918ರ 'ಪ್ರಭಾತ' ಪತ್ರಿಕೆಯಲ್ಲಿ 'ತುತೂರಿ' ಮತ್ತು 'ಸರಸ್ವತಿ' ಕವನಗಳನ್ನು 'ಅಂಬಿಕಾತನಯದತ್ತ' ಕಾವ್ಯನಾಮದಿಂದ ಬರೆದಿದ್ದರು. ಅವು ಅವರ ಮೊದಲ ಪ್ರಕಟಿತ ಕವನಗಳಾಗಿದ್ದವು. ಅದೇ ಕಾವ್ಯನಾಮವನ್ನು ಅವರು ಅನಂತರ ಉಳಿಸಿಕೊಂಡರು. 'ತುತೂರಿ' ಯಲ್ಲಿ ಕಾವ್ಯ ಮೊಳಗಿಸುವ ಧ್ವನಿ, ನಾಡುನುಡಿಯ ಅಭಿಮಾನ, ನಾಡಿಗರನ್ನು ಎಚ್ಚರಿಸುವ ನುಡಿಗಳಿವೆ. ಅದು ಕನ್ನಡಿಗರ ಮಂಗಲ ನಾದವಾಗಿ ಹೊಮ್ಮಿದೆ.

ಸಂಸ್ಕೃತ, ಪ್ರಾಕೃತ, ಪ್ರಾಚೀನ ಕನ್ನಡ, ಜನಪದ ಗೀತ, ಪಾಶ್ಚಾತ್ಯ ಛಂದಸ್ಸುಗಳ ಅಧ್ಯಯನ ನಡೆಸಿದ ಬೇಂದ್ರೆಯವರು ಭಾವಲಹರಿಗೆ ತಕ್ಕಂತೆ ವಿವಿಧ ನವನವೀನ ಛಂದಸ್ಸುಗಳನ್ನು ತಮ್ಮ ಕವನಗಳಲ್ಲಿ ಪ್ರಯೋಗಿಸಿದ್ದಾರೆ. ಮಂದಾನಿಲ ರಗಳೆ ಮಧುರತಿಯ ಛಂದೋಬಂಧ. ನಾಲ್ಕು ನಾಲ್ಕು ಮಾತ್ರೆಗಳ ನಾಲ್ಕು ನಾಲ್ಕು ಚರಣಗಳ

> “ಮುಂದೆ ಮಾಸ್ತಿಯವರಿಗೂ ನನಗೂ ಗಹನ ಸ್ನೇಹಕ್ಕೆ ದಾರಿ ಮಾಡಿಕೊಟ್ಟ, ಮೊದಲು 'ಸ್ವಧರ್ಮ'ದಲ್ಲಿ ಬೆಳಕು ಕಂಡ ಮತ್ತು 'ಗರಿ'ಯಲ್ಲಿ ಪ್ರಥಮಪದ್ಯವಾಗಿ ಬೆಳಕು ಕಂಡ ಮತ್ತು 'ಗರಿ'ಯಲ್ಲಿ ಪ್ರಥಮ ಪದ್ಯವಾಗಿ ಮುದ್ರಿತವಾದ 'ಬೆಳಗು' ('ಮೂಡಲ ಮನೆಯಾ ಮುತ್ತಿನ ನೀರಿನ') ಕವಿತೆಯೇ ಬಹುಶಃ ನನ್ನ ಮೊದಲ ನೂತನ ಛಂದಃ ಪ್ರಯೋಗ (1919). ಇದು ಹೊಸ ಛಂದಸ್ಸು. ಜನ ಹೇಗೆ ಮೆಚ್ಚುವರೋ ಎಂಬ ಭಯ ನನಗಿಲ್ಲದಿರಲಿಲ್ಲ. ಆದ್ದರಿಂದಲೇ ಅದನ್ನು 'ಸದಾನಂದ ಜಂಗಮ' ಎಂಬ ಕಾವ್ಯನಾಮದಿಂದ ಪ್ರಕಟಿಸಿದ್ದೆ (1919).
>
> **ದ.ರಾ. ಬೇಂದ್ರೆ**
>
> ('ನನ್ನ ನಾ ಕಂಡಂತೆ'; ಬೇಂದ್ರೆ ಜೀವನ ಪರಿಚಯ, ವಾಮನ ಬೇಂದ್ರೆ, ಶ್ರೀಮಾತಾ ಪ್ರಕಾಶನ, ಧಾರವಾಡ, 1990. ಪು. 105)